ಇವುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಪಾಂಡ್ಯರ ಜಮೀನ್ದಾರರೆಲ್ಲರೂ ಒಟ್ಟಾಗಿ ಸಭೆ ನಡೆಸಿದರು.

ಸಭೆಯಲ್ಲಿ ಮೂಲ ನಿವಾಸಿಗಳು ಆರಾಧಿಸುವ ನಾಗನನ್ನು ಆರಾಧನೆ ಮಾಡುವ ನಿರ್ಣಯ ಕೈಗೊಂಡರು. ಮೂಲನಿವಾಸಿಗಳ ಮೂಲ ಪಂಚದೈವಗಳಾದ ಲೆಕ್ಕೆಸಿರಿ, ಮೈ ಸೈಂದಾಯ, ಗುಳಿಗ, ಪಂಜುರ್ಲಿ, ಜುಮಾದಿ ಎಂಬ ತುಳು ಹೆಸರಿನ ದೈವಗಳನ್ನು ನಂಬಿ ಸ್ಥಾಪನೆ ಮಾಡುವ ನಿರ್ಣಯಕ್ಕೆ ಬಂದರು. ಅಂತೆಯೇ ಪ್ರಕೃತಿಯನ್ನು ಪೂಜಿಸಿ ಆರಾಧನೆ ಮಾಡುವ ನಿರ್ಧಾರ ತಳೆದರು. ಮಾತ್ರವಲ್ಲದೆ, ಪ್ರಾಯೋಗಿಕವಾಗಿ ಕಾಡುಗಳಿಂದ ನಾಡಿಗೆ ಇಳಿಯುವ ಪ್ರಾಣಿಗಳನ್ನು ತಡೆಯುವ ಸಲುವಾಗಿ 'ಬೆಂಕಿಗೂಡು' ಅಥವಾ 'ಹೊಗೆಗೂಡು'ಗಳನ್ನು ಕಟ್ಟಿದರು.

ದೊಡ್ಡ ಗಾತ್ರದ ಕಲ್ಲು ಚಪ್ಪಡಿಗಳನ್ನು ಬಳಸಿ ಈ ಗೂಡುಗಳನ್ನು ನಿರ್ಮಾಣ ಮಾಡಿದರು. ಬೃಹತ್ ಕಲ್ಲಿನ ಗೂಡುಗಳನ್ನು ಜನಸಾಮಾನ್ಯರು 'ಪಾಂಡ್ಯರ ಕಲ್ಲು' ಎಂದು ಕರೆದರು. ಕ್ರಮೇಣವಾಗಿ ಅದು 'ಪಾಂಡವರ ಕಲ್ಲು' ಎಂದಾಯಿತು. ಇದು ಒಂದು ರೀತಿಯ ಬೃಹತ್ ಅಗ್ನಿಷ್ಟಿಕೆ.

ಬೆಂಕಿ ಆರದಂತೆ ಮತ್ತು ಚೆನ್ನಾಗಿ ಉರಿದು ಹೊಗೆಯಾಡುವಂತೆ ಸಮತಟ್ಟಾದ ಗಟ್ಟಿ ಪಾದೆಕಲ್ಲು ಅಥವಾ ಮುರಕಲ್ಲು ಹರಡಿದ್ದ ಪ್ರದೇಶಗಳಲ್ಲಿ ಈ ಕಲ್ಲಿನ ಅಗ್ನಿಷ್ಟಿಕೆಗಳ ನಿರ್ಮಾಣ ಮಾಡಿದರು. ಇಂತಹ ಜಾಗದಲ್ಲಿ ನೀರು ನಿಲ್ಲುವುದಿಲ್ಲ ಹಾಗೂ ಮಣ್ಣು ಒದ್ದೆಯಾಗಿರುವುದಿಲ್ಲ! ದೂರದಿಂದಲೇ ಕಾಡುಮೃಗಗಳು ಉರಿಯುವ ಬೆಂಕಿಯನ್ನು ರಾತ್ರಿಯಲ್ಲೂ, ಹಬ್ಬಿರುವ ಹೊಗೆಯನ್ನು ಹಗಲಿನಲ್ಲೂ ನೋಡುತ್ತವೆ. ಈ ಬೆಂಕಿ ಅವುಗಳಲ್ಲಿ ಭಯ ಹುಟ್ಟಿಸುವುದರಿಂದ, ಅಪಾಯವನ್ನರಿತು ಅವುಗಳು ಕಾಡುಗಳಲ್ಲೇ ಉಳಿದು ನಾಡಿಗೆ ಇಳಿಯುವ ಸಾಹಸವೆಸಗುವುದಿಲ್ಲ.

ಈ ಬೆಂಕಿ/ ಹೊಗೆ ಗೂಡುಗಳನ್ನು ನಿರ್ಮಾಣ ಮಾಡಲು ಮುಖ್ಯವಾಗಿ ಆರು ಪಾದೆಕಲ್ಲಿನ ಚಪ್ಪಡಿಗಳನ್ನು ಬಳಸಲಾಗಿದೆ. ಚಪ್ಪಡಿಗಳ ವಿನ್ಯಾಸ ಮತ್ತು ಅಳತೆಗಳು ಒಂದೇ ರೀತಿಯಾಗಿರುವುದಿಲ್ಲ. ಮೊದಲಿಗೆ ವಿಸ್ತಾರವಾದ ಪಾದೆಕಲ್ಲಿನ ಮೇಲೆ ಎತ್ತರಕ್ಕೆ ಮಣ್ಣು ಹಾಕಿ ಹದಮಾಡಿ ಚಿಕ್ಕ ದಿನ್ನೆ ತಯಾರಿಸಿ, ಅದರ ಮೇಲೆ ಒಂದು ಚಪ್ಪಡಿ ಕಲ್ಲನ್ನು ಹಾಸಲಾಗಿದೆ. ನಂತರ ಪಾದೆ ಕಲ್ಲಿನ ಮೇಲೆ ಚೌಕಾಕಾರದಲ್ಲಿ ಮೊದಲೇ ಕೊರೆದಿರುವ ಜಾಗದಲ್ಲಿ, ಮೊನಚಾದ ಕೆಳ ಅಂಚು ಹೊಂದಿರುವ ನಾಲ್ಕು ಚಪ್ಪಡಿಗಳನ್ನು ಎತ್ತರಕ್ಕೆ ಲಂಬವಾಗಿ ನೆಡಲಾಗಿದೆ. ಪಶ್ಚಿಮ ದಿಕ್ಕಿನಲ್ಲಿ ನೆಟ್ಟಿರುವ ಚಪ್ಪಡಿಯಲ್ಲಿ ಸುಮಾರು ಒಂದೂವರೆ ಅಡಿಯಷ್ಟು ವ್ಯಾಸದ ಕಿಂಡಿ ಇರುತ್ತದೆ. (ಈ ಕಿಂಡಿಯ ಮೂಲಕ ಬೆಂಕಿ ಉರಿಯಲು ಸಹಾಯಕವಾಗುವಂತೆ ಗಾಳಿಯಾಡುತ್ತದೆ) ನಾಲ್ಕು ಚಪ್ಪಡಿಗಳ ತಳಕೋನದಲ್ಲಿ ಪರಸ್ಪರ ಎರಡು ಚಪ್ಪಡಿಗಳನ್ನು ಒಂದಕ್ಕೊಂದು ತಾಗದಂತೆ ಓರೆಯಾಗಿ ನೆಟ್ಟು ಗೂಡಿನ ತಳಭಾಗವನ್ನು ಹೊರಗಿನಿಂದ ಇಣುಕಿ ನೋಡುವಂತೆ ರಚಿಸಲಾಗಿದೆ.

ಕಂಬ ಹಾಗೂ ಗೋಡೆಯಂತೆ ಕಾರ್ಯ ನಿರ್ವಹಿಸುವ ನಾಲ್ಕು ಚಪ್ಪಡಿಗಳ ಹೊರ ಸುತ್ತಿನಲ್ಲಿ ಹದಗೊಳಿಸಿದ ಮಣ್ಣಿನ ದಿನ್ನೆಯನ್ನು ಒಳಗಿನ ದಿನ್ನೆಯ ಮಟ್ಟಕ್ಕೆ ಏರಿಸಲಾಗಿದೆ. ನಂತರ ಇವುಗಳ ಮೇಲೆ ದೊಡ್ಡ ಗಾತ್ರದ ದಪ್ಪನೆಯ ಚಪ್ಪಡಿಯನ್ನು ಮೇಲ್ಛಾವಣಿಯಾಗಿ ಇರಿಸಲಾಗಿದೆ. (ಬಿಡಿಯಾದ ಇತರ ಕಲ್ಲು ಚಪ್ಪಡಿಗಳನ್ನು ಒಂದಾದ ಬಳಿಕ ಇನ್ನೊಂದರಂತೆ ಉದ್ದನೆಯ ಸರದಿಯ ಸಾಲಿನಲ್ಲಿ ಎತ್ತರೆತ್ತರಕ್ಕೆ ಇಡುತ್ತಾ, ಅದರ ಮೇಲೆ ಬೃಹತ್ ಮೇಲ್ಛಾವಣಿ ಚಪ್ಪಡಿಯನ್ನು ಮರದ ಬಡಿಗೆಗಳಿಂದ ನಿಧಾನವಾಗಿ ಜಾರಿಸುತ್ತಾ, ಗೂಡಿನ ಎತ್ತರಕ್ಕೆ ಬಂದಾಗ ಛಾವಣಿಯ ಮೇಲೆ ಜಾಗರೂಕತೆಯಿಂದ ಜಾರಿಸುವ ಮೂಲಕ ಮೇಲ್ಛಾವಣಿ ಸ್ಥಳಾಂತರಿಸಲಾಗಿದೆ) ಗೂಡಿನ ಒಳಗೆ ಮಳೆ ನೀರು ಬೀಳದಂತೆ ಮೇಲ್ಛಾವಣಿಯ ಕಲ್ಲು ಚಪ್ಪಡಿಯಂಚುಗಳು ಹೊರಚಾಚಿರುತ್ತವೆ ಮತ್ತು ಮಳೆನೀರು ಇಳಿದು ಹೋಗುವಂತೆ ಇಳಿಜಾರಾಗಿವೆ.

ಮೇಲ್ಛಾವಣಿಯ ಚಪ್ಪಡಿ ಮತ್ತು ನೇರವಾಗಿ ನೆಟ್ಟಿರುವ ಚಪ್ಪಡಿಗಳ ಸಂದಿಗಳಲ್ಲಿ ಜಾಗ ಇರಗೊಡಲಾಗಿದೆ. ಹೀಗೆ ಬೆಂಕಿ/ಹೊಗೆ ಗೂಡುಗಳನ್ನು ಸಿದ್ಧಪಡಿಸಲಾಗಿದೆ. ಎದುರಿಗೆ ಕಿರು ದ್ವಾರವೊಂದಿದ್ದು ಇದರ ಮೂಲಕವೇ ಕಟ್ಟಿಗೆ/ ಸೌದೆ ಹಾಕಲಾಗುತ್ತಿತ್ತು. ಬಳಿಕ ಈ ಕಿರು ದ್ವಾರವನ್ನು ಇನ್ನೊಂದು ಕಲ್ಲಿನಿಂದ ಮುಚ್ಚುತ್ತಿದ್ದರು. ಅಗತ್ಯ ಬಿದ್ದಾಗ ಈ ದ್ವಾರದ ಮೂಲಕವೇ ಒಳಗೆ ಪ್ರವೇಶಿಸುತ್ತಿದ್ದರು ಕೂಡ. ಕೆಳಭಾಗದ ಸಂದಿಗಳಲ್ಲಿ ಬೆಂಕಿ ಹಚ್ಚುವ ಮತ್ತು ಒಳಗಿನ ಬೂದಿಯನ್ನು ಎಳೆದು ಹೊರಗೆ ಹಾಕುವ ಕಾರ್ಯ ನಿರ್ವಹಿಸಲಾಗುತ್ತಿತ್ತು.

ಗೂಡಿನಿಂದ ಹೊರಬರುವ ಬೆಂಕಿಯ ಕೆನ್ನಾಲಗೆ ಮತ್ತು ಹೊಗೆಯು ಮೇಲ್ಛಾವಣಿಯ ಅಡಿ ಸಂದು ಹಾಗೂ ಕಿಂಡಿಗಳ ಮೂಲಕ ಹೊರಗೆ ಕಾಣಿಸುತ್ತಿತ್ತು. ಕಿಂಡಿಯಿಂದ ಬೆಂಕಿ ಉರಿಯಲು ಗಾಳಿ ದೊರಕುತ್ತಿತ್ತು. ಈ ವ್ಯವಸ್ಥೆಯನ್ನು ಪಾದೆಕಲ್ಲುಗಳ ಮೇಲೆ ನಿರ್ಮಿಸಿರುವುದರಿಂದ ಯಾವುದೇ ಬೆಂಕಿ ಅನಾಹುತದ ಭಯವಿರಲಿಲ್ಲ. ಸೂಕ್ಷ್ಮವಾಗಿ ಗಮನಿಸಿದರೆ ಬೆಂಕಿ ಹಾಗೂ ಹೊಗೆಯ ಹೊಡೆತಕ್ಕೆ ಸಿಕ್ಕ ಒಳಭಾಗದ ಕಲ್ಲುಗಳು ದುರ್ಬಲವಾಗಿರುವುದನ್ನು, ಮಸಿಯಂತೆ ಕಪ್ಪಾಗಿರುವುದನ್ನು ಈಗಲೂ ಗಮನಿಸಬಹುದು.

ಕಾಲ ಉರುಳಿದಂತೆ ಪಾಂಡ್ಯರು ತಮ್ಮ ಜಮೀನುಗಳನ್ನು ವಿಭಜಿಸಿ ಗೇಣಿಗೆ ನೀಡಿ, ಆ ಜಾಗದ ಜವಾಬ್ದಾರಿಯನ್ನು ಗೇಣಿದಾರರ ಹೆಗಲಿಗೆ ವರ್ಗಾಯಿಸಿದರು. ಕ್ರಮೇಣ ತುಳುನಾಡಿನಾದ್ಯಂತ ಗೇಣಿದಾರರ ಸಂಖ್ಯೆ ಹೆಚ್ಚಿ ಎಲ್ಲೆಡೆ ಮನೆಗಳು ನಿರ್ಮಾಣಗೊಂಡವು. ಪ್ರತಿ ಮನೆಯಲ್ಲೂ ಅಡುಗೆ, ಪಶುಗಳ ಅಕ್ಕಚ್ಚು, ಸ್ನಾನದ ನೀರು, ಭತ್ತ ಬೇಯಿಸುವಿಕೆ ಇತ್ಯಾದಿಗಳಿಗಾಗಿ ವಿವಿಧ ಒಲೆಗಳು ಹುಟ್ಟಿಕೊಂಡವು. ಹಾಗಾಗಿ ನಾಡಿನಾದ್ಯಂತ ಅಗ್ನಿಷ್ಟಿಕೆ ಉರಿದು ಹೊಗೆಯಾಡಲಾರಂಭಿಸಿದ ಪರಿಣಾಮವಾಗಿ ಪಾಂಡವರ ಕಲ್ಲುಗಳೆಂಬ ಈ ಅಗ್ನಿಷ್ಟಿಕೆಯ ಬಳಕೆ ಕಡಿಮೆಯಾಗಿ ಕೊನೆಗೆ ನಿಂತೇ ಬಿಟ್ಟಿತು.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳ ಕಲ್ಲ್, ಮಂಗಳ ಪಾದೆ, ಮಂಗಿಲ ಪದವು ಎಂಬ ಪಾದೆಗಳ ಪ್ರದೇಶಗಳಲ್ಲಿ, ಆರಂಭದ ಕಾಲದಲ್ಲಿ ಈ ಅಗ್ನಿಷ್ಟಿಕೆಯ ಬೆಳಕಿನಲ್ಲಿ ಮದುವೆಯಂತಹ ಶುಭ ಸಮಾರಂಭಗಳೂ ನಡೆಯುತ್ತಿದ್ದವು. ಅನ್ವರ್ಥಕವೆಂಬಂತೆ ಕಾರ್ಕಳದ ಪಳ್ಳಿ ಹಾಗೂ ಕಣಂಜಾರು ಎಂಬ ಊರುಗಳಲ್ಲಿ 'ಮದ್ಮಲ್ ಪಾದೆ' ಅರ್ಥಾತ್ 'ಮದುಮಗಳ ಪಾದೆ' ಎಂಬ ಹೆಸರಿನ ಪಾಂಡವರ ಕಲ್ಲು ಅಸ್ತಿತ್ವದಲ್ಲಿತ್ತು.

ನಾಡು ಬೆಳೆಯುತ್ತಾ ಹೋದಂತೆ ಬೆಂಕಿ ಗೂಡುಗಳು ಅಸ್ತಿತ್ವ ಕಳೆದುಕೊಂಡು ಅಲ್ಲೊಂದು ಇಲ್ಲೊಂದರಂತೆ ಪಳೆಯುಳಿಕೆಗಳಾಗಿ ಕಾಣಿಸಿಕೊಳ್ಳುತ್ತವೆ. ಕೆಲವೆಡೆ ಗಣಿಗಾರಿಕೆ ಫಲವಾಗಿ ಈ ಕಲ್ಲುಗಳು ನಶಿಸಿವೆ.

ನಮ್ಮ ಪೂರ್ವಜರು ನಡೆದುಕೊಂಡು ಬಂದ ದಾರಿ ಹಾಗೂ ಅವರ ಸಾಧನೆಗಳ ಕುರುಹಾಗಿ ಈಗ ಅಪರೂಪವಾಗಿ ಎಲ್ಲೋ ಕೆಲವೆಡೆ ಕಾಣಸಿಗುತ್ತಿರುವ ಇಂತಹ ಪಳೆಯುಳಿಕೆಗಳನ್ನು ಸಂರಕ್ಷಿಸಬೇಕಿದೆ.



ಪ್ರತಿಕ್ರಿಯಿಸಿ: feedback@sudha.co.in